ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

**ಸಿಸಿ 38/2018 ಸಿಡಬ್ಲೂ: 22 ಪಿ ಡಬ್ಲೂ: 5**

| | |
|---|---|
| ಹೆಸರು | ಎಂ. ರಾಜೇಗೌಡ |
| ತಂದೆಯ ಹೆಸರು | ಲೇಟ್ ಮಿಳ್ಳೇಗೌಡ |
| ವಯಸ್ಸು | 65 ವರ್ಷ |
| ವೃತ್ತಿ | ನಿವೃತ್ತ ಎ ಎಸ್ ಐ |
| ವಾಸ | ಮಂಡ್ಯ ಸಿಟಿ |

ದಿನಾಂಕ: 25.11.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದ:

1. ನಾನು ದಿ: 28.02.2018 ರಿಂದ ದಿ: 30.07.2019 ರವರೆಗೂ ಶ್ರೀರಂಗಪಟ್ಟಣದ ನಗರ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿನಾಂಕ: 15.01.2018 ರಂದು ನಾನು ಠಾಣೆಯಲ್ಲಿದ್ದಾಗ ಬೆಂಗಳೂರು ಮೈಸೂರು ಹೆದ್ದಾರಿ ರಸ್ತೆಯಲ್ಲಿ ಅಪಘಾತದಿಂದ ಪೆಟ್ಟಾಗಿ ಮರಿಯಯ್ಯ ಎಂಬುವವರು ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಹಾಗೂ ಅವರ ಹೆಂಡತಿಯಾದ ಪುಟ್ಟಸಿದ್ದಮ್ಮ ಅವರು ಮೃತ ಪಟ್ಟಿರುವ ಬಗ್ಗೆ ಮಾಹಿತಿ ಬಂದ ಮೇರೆ ನಾನು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳು ಮತ್ತು ಪುಟ್ಟಸಿದ್ದಮ್ಮ ರವರ ಶವವನ್ನು ನೋಡಿ ಗಾಯಾಳು ಮರಿಯಯ್ಯ ರವರ ಹೇಳಿಕೆಯನ್ನು ಪಡೆಯುವ ಸಲುವಾಗಿ ವೈದ್ಯರನ್ನು ಕೋರಿದ್ದ ಮೇರೆಗೆ ಅವರು ಅನುಮತಿ ನೀಡಿದ ಮೇರೆಗೆ ರಾತ್ರಿ 8.15 ರಿಂದ 8.45 ರವರಿಗೆ ಗಾಯಾಳುವಿನ ಹೇಳಿಕೆಯನ್ನು ವೈದ್ಯರ

ಸಮಕ್ಷಮ ಪಡೆದಿರುತ್ತೇನೆ. ನಂತರ ರಾತ್ರಿ 9 ಗಂಟೆಗೆ ಬಂದು ಅದೇ ದಿನ ಠಾಣಾ ಮೊಕದ್ದಮೆ ಸಂ.11/2018 ಅನ್ನು ದಾಖಲು ಮಾಡಿ, ಮಾನ್ಯ ನ್ಯಾಯಾಲಯಕ್ಕೂ ಹಾಗೂ ಹಿರಿಯ ಅಧಿಕಾರಿಗೂ ನಿವೇದಿಸಿಕೊಂಡಿರುತ್ತೇನೆ. ದಿಃ 16.01.2018 ರಂದು ಅಪಘಾತ ಸ್ಥಳಕ್ಕೆ ಭೇಟಿ ನೀಡಿ, ಪಂಚರಾದ ಚಾಸಾ 8 ಮತ್ತು 9 ರವರುಗಳನ್ನು ಬರಮಾಡಿಕೊಂಡು ಕೇಸಿನ ವಿದ್ಯಮಾನವನ್ನು ತಿಳಿಸಿ ಪಂಚನಾಮೆಯನ್ನು ಬೆಳಗಿನ 8 ರಿಂದ 8.40 ವರೆಗೂ ಮಾಡಿರುತ್ತೇನೆ. ಅಪಘಾತಕ್ಕೊಳಗಾದ ಕೆಎ-09-ಹೆಚ್ ಎನ್-8004 ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದೇ ದಿನ ಅಪಘಾತಪಡಿಸಿ ಹೊರಟುಹೋಗಿದ್ದ ಕೆ ಎಸ್ ಆರ್ ಟಿ ಸಿ ಬಸ್ ಅನ್ನು ತಿಳಿಸಿ ಪತ್ರ ವ್ಯವಹಾರ ಮಾಡಿರುತ್ತೇನೆ. ನಂತರ ದಿಃ 16.01.2018 ರಂದು ಅಪಘಾತಪಡಿಸಿ ಹೊರಟುಹೋಗಿದ್ದ ಕೆ ಎಸ್ ಆರ್ ಟಿ ಸಿ ಬಸ್ ಅನ್ನು ಠಾಣೆಗೆ ತಂದು ಹಾಜರು ಪಡಿಸಿದ್ದು, ಅದನ್ನು ಪಂಚರ ಸಮಕ್ಷಮ ಅಮಾನತ್ತು ಪಂಚನಾಮೆಯನ್ನು ಬೆಳಗಿನ 7 ರಿಂದ 7.30 ರವಗೆಗೂ ಠಾಣಾ ಆವರಣದಲ್ಲಿ ಮಾಡಿ ಅಮಾನತ್ತುಪಡಿಸಿಕೊಂಡಿಡಿರುತ್ತೇನೆ. ನಂತರ ಈ ಪ್ರಕರಣವು ಘೋರ ಪ್ರಕರಣವಾದ ಕಾರಣ ಚಾಸಾ 23 ರವರಿಗೆ ಮಾಹಿತಿಯನ್ನು ನಿವೇದಿಸಿಕೊಂಡಿದ್ದು, ಅವರು ಇತರೆ ಕರ್ತವ್ಯದಲ್ಲಿ ನಿರತರಾದರ ಕಾರಣ ಶವ ತನಿಖೆ ಮಾಡುವಂತೆ ಮೌಖಿಕ ಆದೇಶ ನೀಡಿದ್ದು, ನಾನು ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿ ಮೃತ ಪುಟ್ಟಸಿದ್ದಮ್ಮವರ ಶವ ತನಿಖಾ ವರದಿಯನ್ನು ಮಾಡಿರುತ್ತೇನೆ. ನಂತರ ಮೃತರ ಮಗಳು ಚಾಸಾ 15 ಹಾಗೂ ಇತರ ಸಾಕ್ಷಿ ಕೆಂಪರಾಜು ಶವ ಪರೀಕ್ಷಾ ಮಾಹಿತಿ ಎಂದು ಕೋರಿದ ಮೇರೆಗೆ ನಾನು ವೈದ್ಯರಿಗೆ ನಿವೇದಿಸಿಕೊಂಡಿರುತ್ತೇನೆ. ಶವ ತನಿಖೆ ಆದ ನಂತರ ಮೃತರ ಕುಟುಂಬಕ್ಕೆ ಶವವನ್ನು

ಹಸ್ತಾಂತರಿಸಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ 23 ರವರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿ ನಿಪಿ1 ಅನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ1(ಬಿ)ಎಂದು ಗುರುತಿಸಲಾಗಿದೆ. ಸಾಕ್ಷಿ ಸ್ಥಳ ಮಹಜರ್ ಅಲ್ಲಿ ಇದ್ದ ಸಹಿಯನ್ನು ನೋಡಿ ಗುರುತಿಸಿದ್ದು, ಸ್ಥಳ ಮಹಜರ್ ಅನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಶವ ತನಿಖಾ ವರದಿಯಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಶವ ತನಿಖಾ ವರದಿಯನ್ನು ನಿಪಿ4 ಎಂದು, ಸಾಕ್ಷಿ ಗುರುತಿಸಿದ ಕೊನೆಯಪುಟದ ಸಹಿಯನ್ನು ನಿಪಿ4(ಎ) ಎಂದು ಗುರುತಿಸಲಾಗಿದೆ. ಅಮಾನತ್ತು ಕಾಲದಲ್ಲಿ ತೆಗೆದ ಫೋಟೋವನ್ನು ನೋಡಿ ಅದು ಅಮಾನತ್ತು ಸಮಯದಲ್ಲಿ ತೆಗೆದಿದ್ದು, ಸದರಿ ಬಸ್ ಅಪಘಾತಪಡಿಸಿದ ಬಸ್ ಎಂದು ಗುರುತಿಸಿರುತ್ತಾರೆ. ಸಾಕ್ಷಿ ಶವ ಪರೀಕ್ಷಾ ವರದಿಯ ಸಮಯದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 5 ಮತ್ತು 6 ಎಂದು ಗುರುತಿಸಲಾಗಿದೆ. (ಸದರಿ ಫೋಟೋಗಳನ್ನು ಆರೋಪಿಯ ಪರ ವಕೀಲರು 65(ಬಿ) ಮತ್ತು ಸಿಡಿ ಇಲ್ಲದ ಕಾರಣ ಆಕ್ಷೇಪಣೆ ಮಾಡಿದ್ದು, ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ).

**ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎನ್ ವಿ ಆರ್ ವಕೀಲರಿಂದಃ**

3. ನಿಪಿ 1 ರಲ್ಲಿ ಇರುವ ಷಾರಾ ನನ್ನದೇ ಆಗಿರುತ್ತದೆ. ನಿಪಿ 1 ರಲ್ಲಿ ಮೇಲೆ ಬರೆದಿರುವ ಅಕ್ಷರಗಳು ಹಾಗೂ ಕೆಳಗೆ ಬರೆದಿರುವ ಅಕ್ಷರಗಳಲ್ಲಿ ವ್ಯತ್ಯಾ ಸ ಇದೆ ಎಂದರೆ ಸರಿ. ನಿಪಿ 1 ರ ಮೇಲೆ ಬರೆದಿರುವ ಅಕ್ಷರಗಳನ್ನು ಠಾಣಾ ಸಿಬ್ಬಂದಿಯಿಂದ ಬರೆಸಿರುತ್ತೇನೆ. ನಿಪಿ 1 ರಲ್ಲಿ ಯಾರು ಹೇಳಿಕೆಯನ್ನು ಬರೆದಿರುತ್ತಾರೆ ಎಂದು ನಮೂದಿಸಿರುವುದಿಲ್ಲ. ಬೆಂಗಳೂರು - ಮೈಸೂರು ರಸ್ತೆ ಹಾಗೂ ಮೈಸೂರು- ಬೆಂಗಳೂರು ರಸ್ತೆ ರಾಷ್ಟ್ರಿಯ ಹೆದ್ದಾರಿ ಎಂದರೆ ಸರಿ. ಅಲ್ಲಿ ಸುಮಾರು

ವಾಹನಗಳು ಓಡಾಡುತ್ತವೆ ಎಂದರೆ ಸರಿ. ದಿಃ 15.01.2018 ಸಂಕ್ರಾಂತಿ ಹಬ್ಬವಾಗಿದ್ದು, ಆ ದಿನ ಲಕ್ಷದೀಪೋತ್ಸವ ಇತ್ತು ಎಂದರೆ ಸರಿ. ಆ ದಿನ ಹೆಚ್ಚು ವಾಹನಗಳು ಹಾಗೂ ಜನರು ಸಂಚರಿಸುತ್ತಿದ್ದರು ಎಂದರೆ ಸರಿ. ಆ ದಿನ ಹೆಚ್ಚು ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿದ್ದರೂ ಎಂದರೆ ಸಾಕ್ಷಿ ದೇವಸ್ಥಾನದ ಬಳಿ ನಿಯೋಜಿಸಿದ್ದು, ಅಪಘಾತ ಸ್ಥಳದಲ್ಲಿ ನಿಯೋಜಿಸಿರಲಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಸ್ಥಳದ ಆಜು-ಬಾಜು ಸಾಯಿ ಬಾಬಾ ದೇವಸ್ಥಾನ, ಹಳ್ಳಿ ಮನೆ ಮತ್ತು ರುಚಿ ಮನೆ ಹೊಟೇಲ್ ಇದೆ ಎಂದರೆ ಸರಿ. ಅಪಘಾತದ ಸ್ಥಳದ ಹತ್ತಿರ ಚೆಕ್ ಪೋಸ್ಟ್ ಇದೆ ಎಂದರೆ ಸಾಕ್ಷಿ 200 ಅಡಿ ಅಂತರದಲ್ಲಿ ಪೂರ್ವ ದಿಕ್ಕಿನಲ್ಲಿದೆ ಎಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ರಸ್ತೆಗಳನ್ನು ಬ್ಲಾಕ್ ಮಾಡಿ ದನಗಳನ್ನು ಕಿಚ್ಚಾಯಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷದೀಪೋತ್ಸವ ಇರುವ ಕಾರಣ ಸಾಯಿ ಬಾಬಾ ದೇವಸ್ಥಾನದಲ್ಲಿ ದೀಪಗಳನ್ನು ಹಚ್ಚುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಸ್ಥಳದಿಂದ ಸ್ವಲ್ಪ ದೂರದಲ್ಲಿ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನ ಇದ್ದು, ಅಲ್ಲಿ ದೀಪಗಳನ್ನು ಹಚ್ಚುತ್ತಾರೆ ಎಂದರೆ ಸರಿ. ಆ ದಿನ ಲಕ್ಷದೀಪೋತ್ಸವ ಇರುವ ಕಾರಣ ಪಾಲಹಳ್ಳಿಯಿಂದ ಜನರು ನಡೆದುಕೊಂಡು ಬರುತ್ತಾರೆ ಎಂದರೆ ಸರಿ.

4. ನಿಪಿ 3 ಸ್ಥಳ ಮಹಜರ್ ನಲ್ಲಿ ಅಪಘಾತಕ್ಕೊಳಗಾದ ಮೊಪೆಡ್ ನ ಪೊಟೋವನ್ನು ಕೆಲಸದ ಒತ್ತಡದಿಂದ ತೆಗೆಸಿರುವುದಿಲ್ಲ. ದ್ವಿ ಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡಾಗ ಅದರ ಪೊಟೋವನ್ನು ತೆಗೆಸಲು ತೊಂದರೆ ಇರಲಿಲ್ಲ, ಆದರೆ ಕೆಲಸದ ಒತ್ತಡ ಇತ್ತು. ಹೇಳಿಕೆಯಲ್ಲಿ ಘಟನೆಯು ಸಂಜೆ 7.20 ರಂದು ಆಗಿರುತ್ತದೆ ಎಂದು ಗಾಯಾಳು ತಿಳಿಸಿರುತ್ತಾರೆ. ಲಕ್ಷ ದೀಪೋತ್ಸವವನ್ನು 6.45 ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದರೆ ಸರಿ. ಆ ಕಾರಣಕ್ಕೆ ಹೆಚ್ಚು ವಾಹನ ಸಂಚರಿಸುತ್ತಿದ್ದು, ಚೆಕ್ ಪೋಸ್ಟ್ ನಲ್ಲಿ ಸಿಬ್ಬಂದಿ ನೇಮಕ ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ

ಸಿಬ್ಬಂದಿ ಕಡಿಮೆ ಇದ್ದು, ದೇವಸ್ಥಾನದ ಭದ್ರತೆ ನೇಮಕ ಮಾಡಿದ್ದರು ಎಂದು ನುಡಿಯುತ್ತಾರೆ. 7.20 ಸಮಯದಲ್ಲಿ ಕತ್ತಲೆಯಾಗಿರುತ್ತದೆ ಎಂದರೆ ಸಾಕ್ಷಿ ಮುಸ್ಸಂಜೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಡಿಸೆಂಬರ್ ನಿಂದ ಫೆಬ್ರವರಿವರೆಗೂ ಬೇಗ ಕತ್ತಲಾಗುತ್ತದೆ ಎಂದರೆ ಸರಿ. ಆ ದಿನ ಎಲ್ಲಾ ವಾಹನಗಳು ಲೈಟ್ ಹಾಕಿಕೊಂಡು ಸಂಚರಿಸುತ್ತಿದ್ದವು ಎಂದರೆ ಸರಿ. ಗಾಯಾಳುವಿಗೆ 70 ಕ್ಕಿಂತ ಹೆಚ್ಚು ವಯಸ್ಸಾಗಿತ್ತು ಎಂದರೆ ಸಾಕ್ಷಿ 65 ವರ್ಷ ಎಂದು ನುಡಿಯುತ್ತಾರೆ. ಗಾಯಾಳು ತನಗೆ ತಾನು ಸ್ಪೆಕ್ಸ್ ಧರಿಸಿದ್ದು, ಆತನಿಗೆ ದೂರದೃಷ್ಟಿ ಕಡಿಮೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಹೇಳಿಕೆಯಲ್ಲಿ ಆ ರೀತಿ ಹೇಳಿಲ್ಲ ಎಂದು ನುಡಿಯುತ್ತಾರೆ. ಆತ ಸ್ಪೆಕ್ಸ್ ಧರಿಸಿರಲಿಲ್ಲ, ನಾನು ಉದ್ದೇಶ ಪೂರ್ವಕವಾಗಿ ಆತ ಸ್ಪೆಕ್ಸ್ ಧರಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಗಾಯಾಳು ಮತ್ತು ಮೃತೆ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ನಾನು ಯಾರ ಹೇಳಿಕೆಯನ್ನು ಪಡೆದಿರುವುದಿಲ್ಲ ಹಾಗೂ ಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ 7.20ರ ಸಮಯದಲ್ಲಿ ಗೌಡಹಳ್ಳಿ ಗೇಟ್ ಬಳಿ ಹೋಗುತ್ತಿತ್ತು ಎಂದರೆ ಸಾಕ್ಷಿ ತನಿಖಾಧಿಕಾರಿಗೆ ಕೇಳಬೇಕು ಎಂದು ನುಡಿಯುತ್ತಾರೆ. ನನಗೆ ವಿ ಟಿ ಎಂ ರಿಪೋರ್ಟ್ ಅನ್ನು ತನಿಖೆ ಸಮಯದಲ್ಲಿ ನೀಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತವು ಬೇರೆ ವಾಹಬನದಿಂದ ಆಗಿದ್ದು, ಪರಿಹಾರಕ್ಕಾಗಿ ಬಸ್ ಚಾಲಕನ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿರುವುದು ನನಗೆ ತಿಳಿದಿದ್ದರೂ ಸಹ ನಾನು ಮೃತರ ಕುಟುಂಬಕ್ಕೆ ಸಹಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ಯಾವುದೇ ಅಪಘಾತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 15.01.2018 ರಂದು ಮಂಡ್ಯ ಪೊಲೀಸ್ ನವರು ವಿ ಟಿ ಎಂ ಆಧಾರದ ಮೇಲೆ ಬಸ್ ನಿಂದ ಅಪಘಾತವಾಗಿಲ್ಲ ಎಂದು ಬಸ್

ಅನ್ನು ಬಿಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ದ್ವಿ ಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಸಂಖ್ಯೆಗಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಂಚರಿಗೆ ಯಾವುದೇ ನೋಟೀಸ್ ಅನ್ನು ನೀಡಿರುವುದಿಲ್ಲ. ನಾನು ಪಂಚರಿಗೆ ನೋಟೀಸ್ ಅನ್ನು ನೀಡಲು ಯಾವುದೇ ತೊಂದರೆ ಇರುವುದಿಲ್ಲ. ನನಗೆ ಮೌಖಿಕವಾಗಿ ಮುಂದಿನ ತನಿಖೆ ಮಾಡಲು ನನಗೆ ಆದೇಶದ ನೀಡಿದ್ದಾರೆ ಎಂದು ನಾನು ನನ್ನ ಮೇಲಾಧಿಕಾರಿಯ ಮಾತುಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಟೋಗಳನ್ನು ನಾನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.*

*ಓ ಹೇ ಕೆ ಸ ಇ ಒ*

*ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು*

*ಶ್ರೀರಂಗಪಟ್ಟಣ.*